KA / BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೫	ಬೆಂಗಳೂರು, ಗುರುವಾರ, ಡಿಸೆಂಬರ್ ೩೦, ೨೦೧೦ (ಪುಷ್ಯ ೯ ಶಕ ವರ್ಷ ೧೯೩೨)	ಸಂಚಿಕೆ ೫೧

ಭಾಗ–೬

ಬೆಂಗಳೂರು ವಿಭಾಗಕ್ಕೆ ಮತ್ತು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು, ಚಿತ್ರದುರ್ಗ, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಸ್ಥಳೀಯವಾಗಿ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು.

ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರ, ಕೋಲಾರ–563 101

ಪತ್ರದ ಸಂಖ್ಯೆ: ದಿನಾಂಕ:18ನೇ ಅಕ್ಟೋಬರ್, 2010

ಸಾರ್ವಜನಿಕರ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದು ಏನೆಂದರೆ, ಸರ್ಕಾರದ ಆದೇಶ ಸಂಖ್ಯೆ: ನಅಇ 208 ಬೆಂರೂಪ್ರಾ: 2010, ಬೆಂಗಳೂರು ದಿನಾಂಕ:09.08.2010ರಂದು ಕೋಲಾರ ಸ್ಥಳೀಯ ಯೋಜನಾ ಪ್ರದೇಶದ ಮಹಾ ಯೋಜನೆ (ಪರಿಷ್ಕೃತ–1) 2021ಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13 ರನ್ವಯ ಸರ್ಕಾರವು ಅಂತಿಮ ಅನುಮೋದನೆಯನ್ನು ನೀಡಿರುತ್ತದೆ.

ಸರ್ಕಾರದಿಂದ ಅನುಮೋದನೆಯಾದ ಮಹಾ ಯೋಜನೆಯ ವರದಿ ಮತ್ತು ನಕ್ಷೆಗಳನ್ನು ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರ ಕಛೇರಿಯಲ್ಲಿ ಸಾರ್ವಜನಿಕರ ವೀಕ್ಷಣೆಗೆ ಇಡಲಾಗಿದೆ. ಇವುಗಳನ್ನು ಸಾರ್ವಜನಿಕರು ಕಛೇರಿಯ ವೇಳೆಯಲ್ಲಿ ವೀಕ್ಷಿಸಬಹುದಾಗಿದೆ.

ಆಯುಕ್ತರು,

ಪಿಡಿ–19 ನಗರಾಭಿವೃದ್ಧಿ ಪ್ರಾಧಿಕಾರ, ಕೋಲಾರ.

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಂಇ 76 ಎಲ್‌ಆರ್‌ಎಂ 2010, ಬೆಂಗಳೂರು, ದಿನಾಂಕ:27ನೇ ನವೆಂಬರ್, 2010

ಅಲ್ಟ್ರಾಟೆಕ್ ಸಿಮೆಂಟ್ ಲಿಮಿಟೆಡ್–ಯೂನಿಟ್ ರಾಜಶ್ರೀ ಸಿಮೆಂಟ್ ವರ್ಕ್ಸ್, ಗುಲ್ಬರ್ಗಾ ಜಿಲ್ಲೆ, ಇವರಿಗೆ ಗುಲ್ಬರ್ಗಾ ಜಿಲ್ಲೆ, ಸೇಡಂ ತಾಲ್ಲೂಕಿನ ಹಂಗನಹಳ್ಳಿ ಮತ್ತು ಮಳಖೇಡ ಗ್ರಾಮಗಳ ವಿವಿಧ ಸರ್ವೆ ನಂಬರ್‌ಗಳಲ್ಲಿ ಒಟ್ಟು 572 ಎಕರೆ 24 ಗುಂಟೆ ಕೃಷಿ ಜಮೀನನ್ನು ಕೈಗಾರಿಕಾ ಉದ್ದೇಶದ ಸಲುವಾಗಿ ಅರ್ಜಿ ನಮೂನೆ 15–ಎ ಮತ್ತು ನಮೂನೆ 15–ಎಎ ರಲ್ಲಿನ ಮಾಹಿತಿಗಳನ್ನು ಅನುಸರಿಸಿ ಜಿಲ್ಲಾಧಿಕಾರಿ, ಗುಲ್ಬರ್ಗಾ ಜಿಲ್ಲೆ, ಇವರ ಪತ್ರ ಸಂಖ್ಯೆ: ಕಂ:ಭೂಸು/56/2009–10, ದಿನಾಂಕ:02.09.2010ರಲ್ಲಿ ಪ್ರಸ್ತಾಪಿತ ಮೇಲ್ಕಂಡ ಜಮೀನನ್ನು ಖರೀದಿಸಲು ಕರ್ನಾಟಕ ಭೂ ಸುಧಾರಣೆ ಅಧಿನಿಯಮ, 1961ರ ಕಲಂ 109(1)ರಡಿ ಅನುಮೋದನೆ/ ವಿನಾಯಿತಿ ನೀಡಲು ಶಿಫಾರಸು ಮಾಡಿರುತ್ತಾರೆ.

ಪ್ರಸ್ತಾಪಿತ ಜಮೀನನ್ನು ಖರೀದಿಗೆ ಪಡೆಯಲು ಖಾತೆದಾರರಿಂದ ವ್ಯವಹರಿಸಿಕೊಂಡಿದ್ದು ಹಾಗೂ ಸದರಿ ಜಮೀನು ಕರ್ನಾಟಕ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ (ಪಿ.ಟಿ.ಸಿ.ಎಲ್.) ಅಧಿನಿಯಮ 1978, ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿಗಳು ಹಾಗೂ ಇನ್ನಿತರ ಪರಭಾರೆ ನಿಷೇಧ ಕಾಯ್ದೆಗಳ ವ್ಯಾಪ್ತಿಗೆ ಒಳಪಡುವುದಿಲ್ಲ.

ರಾಜ್ಯ ಸರ್ಕಾರವು ಸಾರ್ವಜನಿಕ ಹಿತಾಸಕ್ತಿಯ ಮೇಲೆ ಕಾರಣಗಳನ್ನು ದಾಖಲಿಸಿ ನಿರ್ದಿಷ್ಟ ಉದ್ದೇಶಕ್ಕಾಗಿ ಎಷ್ಟೇ ವಿಸ್ತೀರ್ಣದ ಭೂಮಿಯನ್ನು ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸಿ ಕರ್ನಾಟಕ ಭೂ ಸುಧಾರಣಾ ಅಧಿನಿಯಮ 1961ರ ಕಲಂ 63, 79ಎ, 79ಬಿ ಅಥವಾ 80ರ ಅವಕಾಶಗಳಿಂದ ವಿನಾಯಿತಿ ನೀಡಲು ಸದರಿ ಅಧಿನಿಯಮದ ಕಲಂ 109(1ಎ) ರಡಿ ಅವಕಾಶ ಕಲ್ಪಿಸಿದೆ.

ಈ ಪ್ರಸ್ತಾವನೆಯು ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ಅಧಿನಿಯಮ 1995ರ ಕಲಂ 109(1ಎ) ಮತ್ತು ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ನಿಯಮಗಳು, 1996ರ ನಿಯಮ 38–ಬಿ ಮತ್ತು 38–ಸಿ ರಲ್ಲಿನ ಷರತ್ತುಗಳನ್ನು ಪೂರೈಸಿದ್ದು ಕರ್ನಾಟಕ ಭೂ ಸುಧಾರಣೆ ಅಧಿನಿಯಮ 1961ರ ಕಲಂ 63, 79ಎ, 79ಬಿ ಮತ್ತು 80ಕ್ಕೆ ವಿನಾಯಿತಿ ನೀಡಿ ಜಿಲ್ಲಾಧಿಕಾರಿಯವರ ವರದಿಯ ಪ್ರಕಾರ ಅಲ್ಟ್ರಾಟೆಕ್ ಸಿಮೆಂಟ್ ಲಿಮಿಟೆಡ್–ಯೂನಿಟ್ ರಾಜಶ್ರೀ ಸಿಮೆಂಟ್ ವರ್ಕ್ಸ್, ಗುಲ್ಬರ್ಗಾ ಜಿಲ್ಲೆ, ಇವರಿಗೆ ಗುಲ್ಬರ್ಗಾ ಜಿಲ್ಲೆ, ಸೇಡಂ ತಾಲ್ಲೂಕಿನ ಹಂಗನಹಳ್ಳಿ ಮತ್ತು ಮಳಖೇಡ ಗ್ರಾಮಗಳ ವಿವಿಧ ಸರ್ವೆ ನಂಬರ್‌ಗಳಲ್ಲಿ ಒಟ್ಟು 572 ಎಕರೆ 24 ಗುಂಟೆ ಕೃಷಿ ಜಮೀನನ್ನು ಕೈಗಾರಿಕಾ ಉದ್ದೇಶದ ಸಲುವಾಗಿ ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961ರ ಕಲಂ 109ರಡಿ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಂತೆ ಸರ್ಕಾರದ ಅನುಮತಿ ನೀಡಲಾಗಿದೆ:

1) ಯಾವ ಉದ್ದೇಶಕ್ಕಾಗಿ ಜಮೀನನ್ನು ಖರೀದಿಸಲು ಅನುಮತಿ ನೀಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಸದರಿ ಜಮೀನನ್ನು ಎರಡು ವರ್ಷಗಳೊಳಗಾಗಿ ಉಪಯೋಗಿಸತಕ್ಕದ್ದು ಮತ್ತು ಆ ಬಗ್ಗೆ ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಲಿಖಿತವಾಗಿ ಮಾಹಿತಿ ನೀಡತಕ್ಕದ್ದು.
2) ವಿನಾಯಿತಿ ಪಡೆದವರು ಸರ್ಕಾರ ಅಥವಾ ಯಾವುದೇ ಷೆಡ್ಯೂಲ್ ಬ್ಯಾಂಕ್ ಅಥವಾ ಸಹಕಾರಿ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಒಂದಕ್ಕೆ ಅಥವಾ ಕಂಪನಿ ಕಾಯ್ದೆ, 1956ರ ಕಲಂ 3ರಲ್ಲಿ ಹೇಳಿರುವಂತೆ, ಶೇಕಡಾ 51 ಪೇಯ್ಡ್ ಆಫ್ ಷೇರು ಬಂಡವಾಳ ಹೊಂದಿದ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ನಿಯಂತ್ರಿತ ಅಥವಾ ಎರಡರ ಹಿಡಿತ ಹೊಂದಿರುವ ಸರ್ಕಾರದ ಸಂಘ/ಸಂಸ್ಥೆ ಒಂದಕ್ಕೆ ಖಾತರಿ ನೀಡಿ ಅಡಮಾನ ಹಾಗೂ ಇತರೆ ಹೊಣೆ ಮಾಡಿ ಸಾಲ ಪಡೆಯುವುದನ್ನು ಹೊರತುಪಡಿಸಿ ಸದರಿ ಜಮೀನನ್ನು ನಿಗದಿತ ಉದ್ದೇಶಕ್ಕಲ್ಲದೆ ಬೇರೆ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.
3) ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರಂತೆ ಮಂಜೂರು ಮಾಡಬೇಕಾದಂತಹ ಯಾವುದೇ ಸರ್ಕಾರಿ ಜಮೀನುಗಳು ಇದ್ದಲ್ಲಿ ಹೊರತುಪಡಿಸಲಾಗಿದೆ.
4) ಜಮೀನು ನಗರಾಭಿವೃದ್ಧಿ ಪ್ರಾಧಿಕಾರ ಸಿ.ಡಿ.ಪಿ./ಒ.ಡಿ.ಪಿ. ವ್ಯಾಪ್ತಿಯೊಳಗೆ ಬಂದರೆ, ಅದರಂತೆ ಅನುಮತಿ ಪಡೆದು ಉಪಯೋಗಿಸತಕ್ಕದ್ದು.
5) ಈ ಅನುಮತಿಯು ಕರ್ನಾಟಕ ಭೂ ಸುಧಾರಣೆ ಅಧಿನಿಯಮ, 1961ರ ಕಲಂ 109 ರನ್ವಯ ವಿನಾಯಿತಿ ಮಾತ್ರವಾಗಿರುತ್ತದೆ. ಬೇರೆ ಕಾನೂನುಗಳ ಉಲ್ಲಂಘನೆಯಾದಲ್ಲಿ ಸಂಬಂಧಿಸಿದ ಕಾಯ್ದೆಯಡಿ ಅಗತ್ಯ ಕ್ರಮ ಜರುಗಿಸಲು ಅವಕಾಶವಿರುತ್ತದೆ.
6) ಈ ಜಮೀನನ್ನು ವ್ಯವಸಾಯದಿಂದ ವ್ಯವಸಾಯೇತರ ಉದ್ದೇಶಕ್ಕಾಗಿ ಪರಿವರ್ತಿಸಿಕೊಳ್ಳಲು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಕಲಂ 95ರಂತೆ ಜಿಲ್ಲಾಧಿಕಾರಿಗಳಿಂದ ಅನುಮತಿ ಪಡೆಯತಕ್ಕದ್ದು.
7) ಸಂಸ್ಥೆ ನಡೆಸುವ ಚಟುವಟಿಕೆಗಳು ಸ್ಥಳೀಯ ಕಾನೂನು, ಕರ್ನಾಟಕ ಮತ್ತು ಭಾರತದ ಕಾನೂನುಗಳನ್ನು ಪಾಲಿಸತಕ್ಕದ್ದು.
8) ಪ್ರಸ್ತಾಪಿತ ಜಮೀನುಗಳಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಮೊದಲು ಜಮೀನಿನ ವಿನ್ಯಾಸಕ್ಕೆ ನಗರ ಯೋಜನಾ ಇಲಾಖೆ/ ಅಭಿವೃದ್ಧಿ ಪ್ರಾಧಿಕಾರ/ ಸ್ಥಳೀಯ ಪ್ರಾಧಿಕಾರಗಳಿಂದ ಅನುಮೋದನೆ ಪಡೆಯತಕ್ಕದ್ದು.
9) ಮೇಲಿನ ಷರತ್ತುಗಳು ಉಲ್ಲಂಘನೆಯಾದಲ್ಲಿ ಈಗ ನೀಡಲಾಗಿರುವ ಅನುಮತಿಯನ್ನು ಕಾನೂನು ರೀತ್ಯ ರದ್ದುಪಡಿಸಲಾಗುವುದು ಮತ್ತು ಪ್ರಸ್ತಾಪಿತ ಭೂಮಿಯನ್ನು ಋಣಮುಕ್ತವಾಗಿ ಸರ್ಕಾರದಲ್ಲಿ ನಿಹಿತ ಮಾಡಿಕೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 459

ಟಿ.ಎನ್. ನಾರಾಯಣಗೌಡ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂ ಸುಧಾರಣೆ)

ಕಂದಾಯ ಸಚಿವಾಲಯ

ಭೂ ಸ್ವಾಧೀನ ಕಾಯಿದೆಯ ಕಲಂ–6(1)ರ ಅನ್ವಯ ಹೊರಡಿಸಲಾದ ಅಂತಿಮ ಅಧಿಸೂಚನೆಗೆ ಮಾಡಲಾದ ತಿದ್ದುಪಡಿ ಅಧಿಸೂಚನೆ

ಕ್ರಮಾಂಕ: ಕಂಇ.30.ಭೂಸ್ವಾಚ.2009, ದಿನಾಂಕ:27ನೇ ನವೆಂಬರ್, 2010

ಚನ್ನಗಿರಿ ತಾಲ್ಲೂಕು ಸಂತೆಬೆನ್ನೂರು 2ನೇ ಹೋಬಳಿ ಕರೇಕಟ್ಟೆ ಗ್ರಾಮದ ರಿ.ಸ.ನಂ.56/1 ಹಾಗೂ ಇತರೆ ಸೇರಿ ಒಟ್ಟು 30–01 ಎಕರೆ 0–25 ಗುಂಟೆ ಖರಾಬು ಜಮೀನನ್ನು ಗ್ರಾಮ ಸ್ಥಳಾಂತರಕ್ಕಾಗಿ ಸಲುವಾಗಿ ಭೂ ಸ್ವಾಧೀನ ಪಡಿಸಿಕೊಳ್ಳುತ್ತಿರುವ ಪ್ರಕರಣದಲ್ಲಿ ಹೊರಡಿಸಲಾದ ಭೂ ಸ್ವಾಧೀನ ಕಾಯ್ದೆಯ ಕಲಂ–6(1)ರ ಅಂತಿಮ ಅಧಿಸೂಚನೆ ಸಂ.ಕಂಇ.30.ಭೂಸ್ವಾಚ.2009, ದಿನಾಂಕ:20.07.2009ರ ಅಧಿಸೂಚನೆಯ ಕ್ರ.ಸಂ.6ರ ಸ.ನಂ.58/1ಪಿ2ರ 2–21 ಎಕರೆ ವಿಸ್ತೀರ್ಣಕ್ಕೆ ಬದಲಾಗಿ 2–31 ಎಕರೆ ಎಂದು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 460

ಎಂ. ವೆಂಕಟೇಶಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂ ಸ್ವಾಧೀನ–2)

ವಿಶೇಷ ಭೂ ಸ್ವಾಧೀನಾಧಿಕಾರಿಗಳ ಕಾರ್ಯಾಲಯ: ನ್ಯಾಯಾಲಯ, ತುಂಗಾ ಮೇಲ್ದಂಡೆ ಯೋಜನೆ, ಶಿವಮೊಗ್ಗ

ಭೂ ಸ್ವಾಧೀನ ಅಧಿನಿಯಮ 1894 ಪ್ರಕರಣ 16(2)ರ ಅನುಸಾರ ಪ್ರಕಟಣೆ

ಕ್ರಮಾಂಕ: ತುಂಮೇಯೋ ಎಲ್‌ಎಕ್ಯೂ ಸಿಆರ್1/2001–02, ದಿನಾಂಕ:25ನೇ ಸೆಪ್ಟೆಂಬರ್, 2010

ಭೂ ಸ್ವಾಧೀನ ಅಧಿನಿಯಮ ಪ್ರಕರಣ 16(1) (ಕರ್ನಾಟಕ ವಿಸ್ತರಣಾ ತಿದ್ದುಪಡಿ ಅಧಿನಿಯಮ 17:1961ರ ಪ್ರಕಾರ) ರ ಅನುಸಾರ ಅನುಸೂಚಿ ಜಮೀನುಗಳನ್ನು ತುಂಗಾ ಮೇಲ್ದಂಡೆ ಯೋಜನೆ ಮುಖ್ಯ ಕಾಲುವೆ ನಿರ್ಮಾಣದ ಸಾರ್ವಜನಿಕ ಉದ್ದೇಶಕ್ಕಾಗಿ ಭೂ ಸ್ವಾಧೀನ (ವಶ) ಪಡಿಸಿಕೊಂಡಿರುತ್ತದೆ ಎಂದು ಭೂ ಸ್ವಾಧೀನ ಅಧಿನಿಯಮ ಪ್ರಕರಣ 16(2) (ಕರ್ನಾಟಕ ವಿಸ್ತರಣಾ ತಿದ್ದುಪಡಿ ಅಧಿನಿಯಮ 17:1961ರ ಪ್ರಕಾರ) ಅನುಸಾರ ಈ ಮೂಲಕ ಪ್ರಕಟಿಸಲಾಗಿದೆ.

ಅನುಸೂಚಿ

ಜಿಲ್ಲೆ: ಶಿವಮೊಗ್ಗ **ಹೋಬಳಿ: ಹೊಳಲೂರು**

ತಾಲ್ಲೂಕು: ಶಿವಮೊಗ್ಗ **ಗ್ರಾಮ: ಲಿಂಗಾಪುರ**

ಕ್ರ. ಸಂ.	ಖಾತೆದಾರರ ಹೆಸರು	ಸರ್ವೆ ನಂ.	ತರಹೆ	ಭೂ ಸ್ವಾಧೀನ ವಿಸ್ತೀರ್ಣ	ಆಕಾರ	ಮುಂಗಡ ಸ್ವಾಧೀನ ದಿನಾಂಕ
1	2	3	4	5	6	7
1.	1) ಗಂಗಾಧರಪ್ಪ ಬಿನ್ ರುದ್ರಪ್ಪ	1ರ ಪೈಕಿ	ತರಿ	0–08	0–24	
	2) ಗಂಗಾಧರಪ್ಪ ಬಿನ್ ರುದ್ರಪ್ಪ	1ರ ಪೈಕಿ	ತರಿ	0–13	1–81	
2.	1) ಕರಿಬಸಪ್ಪ ಬಿನ್ ಕೆಂಚಪ್ಪ	1ರ ಪೈಕಿ	ತರಿ	0–05	0–15	
	2) ಕರಿಬಸಪ್ಪ ಬಿನ್ ಕೆಂಚಪ್ಪ	1ರ ಪೈಕಿ	ತರಿ	0–09	1–25	
3.	1) ವೀರಪ್ಪ ಬಿನ್ ಚನ್ನವೀರಪ್ಪ	1ರ ಪೈಕಿ	ತರಿ	0–04	0–12	
	2) ವೀರಪ್ಪ ಬಿನ್ ಚನ್ನವೀರಪ್ಪ	1ರ ಪೈಕಿ	ಖುಷ್ಕಿ	0–02	0–05	
			ತರಿ	0–07	0–97	
4.	1) ಹನುಮಂತಮ್ಮ ಕೋಂ ರುದ್ರಪ್ಪ	1ರ ಪೈಕಿ	ತರಿ	0–05	0–15	
	2) ಹನುಮಂತಮ್ಮ ಕೋಂ ರುದ್ರಪ್ಪ	1ರ ಪೈಕಿ	ತರಿ	0–07	0–97	
			ಖುಷ್ಕಿ	0–02	0–06	
5.	1) ಕೆ.ವಿ. ರಾಜಶೇಖರಪ್ಪ ಬಿನ್ ಪರಮೇಶ್ವರಪ್ಪ	1ರ ಪೈಕಿ	ಭಾಗಾಯ್ತು	0–01	0–22	
	2) ಕೆ.ವಿ. ರಾಜಶೇಖರಪ್ಪ ಬಿನ್ ಪರಮೇಶ್ವರಪ್ಪ	1ರ ಪೈಕಿ	ತರಿ	0–03	0–12	
			ತರಿ	0–02	0–71	
			ಖುಷ್ಕಿ	0–04	0–12	
6.	1) ಸರ್ವಮಂಗಳಮ್ಮ ಕೋಂ ಈಶ್ವರಪ್ಪ	1ರ ಪೈಕಿ	ಭಾಗಾಯ್ತು	0–01	0–22	
	2) ಸರ್ವಮಂಗಳಮ್ಮ ಕೋಂ ಈಶ್ವರಪ್ಪ	1ರ ಪೈಕಿ	ತರಿ	0–01	0–06	
			ಖುಷ್ಕಿ	0–03	0–09	
7.	1) ವೀರಭದ್ರಯ್ಯ ಬಿನ್ ಹನುಮಂತಪ್ಪ	1ರ ಪೈಕಿ	ಭಾಗಾಯ್ತು	0–01	0–22	
	2) ವೀರಭದ್ರಯ್ಯ ಬಿನ್ ಹನುಮಂತಪ್ಪ	1ರ ಪೈಕಿ	ತರಿ	0–03	0–12	
			ಖುಷ್ಕಿ	0–02	0–06	
8.	ವೀರಸಂಗಪ್ಪ ಬಿನ್ ಭದ್ರಪ್ಪ	1ರ ಪೈಕಿ	ತರಿ	0–02	0–06	
9.	1) ತೋಟಯ್ಯ ಬಿನ್ ಮಹದೇವಪ್ಪ	1ರ ಪೈಕಿ	ತರಿ	0–04	0–12	
	2) ತೋಟಯ್ಯ ಬಿನ್ ಮಹದೇವಪ್ಪ	1ರ ಪೈಕಿ	ಖುಷ್ಕಿ	0–20	0–60	
10.	ಹಾಲೇಶಪ್ಪ ಬಿನ್ ವೀರಭದ್ರಪ್ಪ	1ರ ಪೈಕಿ	ತರಿ	0–05	0–05	
			ಒಟ್ಟು	**2–34**	**8–94**	

ವಿಶೇಷ ಭೂಸ್ವಾಧೀನಾಧಿಕಾರಿಗಳು,

ಪಿ.ಆರ್. 414 ತುಂಗಾ ಮೇಲ್ದಂಡೆ ಯೋಜನೆ, ಶಿವಮೊಗ್ಗ.

ವಿಶೇಷ ಭೂಸ್ವಾಧೀನಾಧಿಕಾರಿಗಳವರ ಕಾರ್ಯಾಲಯ, ಹೇಮಾವತಿ ನಾಲಾ ವಲಯ, ತುಮಕೂರು

ಭೂ ಸ್ವಾಧೀನ ಅಧಿನಿಯಮ 1894ರ ಪ್ರಕರಣ 16(2)ರ ಅನ್ವಯ ಅಧಿಸೂಚನೆ

ಪ್ರಕರಣ ಸಂಖ್ಯೆ: ಎಸ್‌ಎಲ್‌ಎಓ/ಎಸ್‌ಆರ್(ಎ) 04/06-07, ದಿನಾಂಕ:1ನೇ ಅಕ್ಟೋಬರ್, 2010

ಕರ್ನಾಟಕ ಸರ್ಕಾರದವರು 1961ನೇ ಸಾಲಿನ ಕರ್ನಾಟಕ ಅಧಿನಿಯಮ ಕ್ರಮಸಂಖ್ಯೆ: 17ರಲ್ಲಿ ತಿದ್ದುಪಡಿಯಾದ 1894ನೇ ಸಾಲಿನ ಭೂಸಂಗ್ರಹಣ ಅಧಿನಿಯಮ (1894ರ ಸಾಲಿನ ಕೇಂದ್ರ ಅಧಿನಿಯಮ 1ರ) ಪ್ರಕರಣ 16(2)ರ ಮೇರೆಗೆ ಈ ಮೂಲಕ ಅನುಸೂಚಿಯಡಿ ಸೂಚಿಸಲಾದ ಜಮೀನುಗಳನ್ನು ಒಂದು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ಹೇಮಾವತಿ ನಾಲಾ ಯೋಜನೆಯ ನಾಲಾ ನಿರ್ಮಾಣಕ್ಕಾಗಿ ಅಧಿಕೃತವಾಗಿ ಸದರಿ ಭೂಸ್ವಾಧೀನ ಅಧಿನಿಯಮದ ಪ್ರಕರಣದ 16(1)ರಂತೆ ವಶಪಡಿಸಿಕೊಳ್ಳಲಾಗಿದೆ ಎಂದು ಈ ಮೂಲಕ ಪ್ರಕಟಿಸಲಾಗಿದೆ ಹಾಗೂ ಕಾವೇರಿ ನೀರಾವರಿ ನಿಗಮ ನಿಯಮಿತ ರವರಿಗೆ ವಹಿಸಿಕೊಡಲಾಗಿದೆ ಎಂದು ಈ ಮೂಲಕ ಪ್ರಕಟಿಸಲಾಗಿದೆ.

ಅನುಸೂಚಿ

ಜಿಲ್ಲೆ: ತುಮಕೂರು ತಾಲ್ಲೂಕು: ತುರುವೇಕೆರೆ ಹೋಬಳಿ: ಮಾಯಸಂದ್ರ ಗ್ರಾಮ: ಕಲ್ಲುನಾಗತಿಹಳ್ಳಿ

ಕ್ರ. ಸಂ.	ಸ.ನಂ.	ತರಹೆ	ವಿಸ್ತೀರ್ಣ ಎ-ಗುಂ	ಆಕಾರ ರೂ.ಪೈ	ವಶಪಡಿಸಿಕೊಂಡ ದಿನಾಂಕ
		ಗ್ರಾಮ: ಕಲ್ಲುನಾಗತಿಹಳ್ಳಿ			
1.	10/1ಬಿ1	ಖುಷ್ಕಿ	0-02	0-06	04.05.2006
2.	10/2ಬಿ	ಖುಷ್ಕಿ	0-02	0-06	04.05.2006
3.	7/1	ಖುಷ್ಕಿ	0-02 1/2	0-06	04.05.2006
4.	7/2	ಖುಷ್ಕಿ	0-02 1/2	0-06	04.05.2006
5.	6/1	ಖುಷ್ಕಿ	0-02	0-06	04.05.2006
6.	6/2ಎ	ಖುಷ್ಕಿ	0-02 1/2	0-07	04.05.2006
7.	5/2	ಖುಷ್ಕಿ	0-08	0-19	04.05.2006
8.	3	ಖುಷ್ಕಿ	0-03	0-08	04.05.2006
9.	2/7ಎ	ಖುಷ್ಕಿ	0-03	0-08	04.05.2006
10.	2/3	ಖುಷ್ಕಿ	0-02 1/2	0-07	04.05.2006
11.	1/15	ಖುಷ್ಕಿ	0-01 1/2	0-04	04.05.2006
12.	1/14	ಖುಷ್ಕಿ	0-01	0-02	04.05.2006
13.	1/12	ಖುಷ್ಕಿ	0-01	0-02	04.05.2006
14.	1/11	ಖುಷ್ಕಿ	0-01	0-02	04.05.2006
15.	1/5	ಖುಷ್ಕಿ	0-04	0-10	04.05.2006
16.	1/6	ಖುಷ್ಕಿ	0-03	0-07	04.05.2006
17.	79/1	ಖುಷ್ಕಿ	0-1 1/2	0-04	04.05.2006
18.	79/3	ಖುಷ್ಕಿ	0-01 1/2	0-04	04.05.2006
19.	79/4	ಖುಷ್ಕಿ	0-01	0-02	04.05.2006
20.	79/5	ಖುಷ್ಕಿ	0-01	0-02	04.05.2006
21.	79/6	ಖುಷ್ಕಿ	0-01 1/4	0-03	04.05.2006
22.	79/7	ಖುಷ್ಕಿ	0-01 1/4	0-03	04.05.2006
23.	79/8	ಖುಷ್ಕಿ	0-01 1/4	0-03	04.05.2006
24.	79/9	ಖುಷ್ಕಿ	0-01 1/4	0-03	04.05.2006
25.	79/10	ಖುಷ್ಕಿ	0-01	0-02	04.05.2006
26.	32	ಖುಷ್ಕಿ	0-02	0-04	04.05.2006

ಕ್ರ. ಸಂ.	ಸ.ನಂ.	ತರಹೆ	ವಿಸ್ತೀರ್ಣ ಎ–ಗುಂ	ಆಕಾರ ರೂ.ಪೈ	ವಶಪಡಿಸಿಕೊಂಡ ದಿನಾಂಕ
27.	33/1	ಖುಷ್ಕಿ	0–02	0–05	04.05.2006
28.	33/2ಬಿ	ಖುಷ್ಕಿ	0–01 1/2	0–04	04.05.2006
29.	33/2ಎ1	ಖುಷ್ಕಿ	0–02 1/4	0–05	04.05.2006
30.	34/1	ಖುಷ್ಕಿ	0–01 1/4	0–03	04.05.2006
31.	34/2ಎ	ಖುಷ್ಕಿ	0–01	0–02	04.05.2006
32.	34/6	ಖುಷ್ಕಿ	0–01 1/4	0–03	04.05.2006
33.	34/7	ಖುಷ್ಕಿ	0–03 1/2	0–08	04.05.2006
34.	34/8	ಖುಷ್ಕಿ	0–02	0–05	04.05.2006
35.	58/2	ಖುಷ್ಕಿ	0–03	0–08	04.05.2006
36.	58/1ಎ	ಖುಷ್ಕಿ	0–02	0–05	04.05.2006
37.	58/1ಬಿ	ಖುಷ್ಕಿ	0–02	0–05	04.05.2006
38.	58/1ಸಿ	ಖುಷ್ಕಿ	0–02	0–07	04.05.2006
39.	59	ಖುಷ್ಕಿ	0–04	0–09	04.05.2006
40.	60/1	ಖುಷ್ಕಿ	0–02 1/2	0–07	04.05.2006
41.	61	ಖುಷ್ಕಿ	0–02 1/2	0–06	04.05.2006
42.	9/1	ಖುಷ್ಕಿ	0–02	0–05	04.05.2006
43.	60/2	ಖುಷ್ಕಿ	0–02	0–06	04.05.2006
		ಒಟ್ಟು	**2–11 1/4**	**2–29**	

ವಿಶೇಷ ಭೂಸ್ವಾಧೀನಾಧಿಕಾರಿಗಳು,
ಪಿ.ಆರ್. 417 ಹೇಮಾವತಿ ನಾಲಾವಲಯ, ತುಮಕೂರು.

ವಿಶೇಷ ಭೂಸ್ವಾಧೀನಾಧಿಕಾರಿಗಳ ಕಾರ್ಯಾಲಯ, ಕೊಟ್ಟೂರು–ಹರಿಹರ ರೈಲ್ವೆ ಬ್ರಾಡ್‌ಗೇಜ್ ಲೈನ್ ನಿರ್ಮಾಣ ಯೋಜನೆ, ಹರಿಹರ, (ದಾವಣಗೆರೆ ಜಿಲ್ಲೆ)

ಕರ್ನಾಟಕ ಭೂಸ್ವಾಧೀನ ಕಾಯ್ದೆ 1894ರ ಕಲಂ16(2) ಅಡಿ (ಕಲಂ.17(4)ರಲ್ಲಿ ಓದಲಾದಂತೆ)

(ರೈಲ್ವೆ ಮಾರ್ಗದ ಅಗಲೀಕರಣಕ್ಕಾಗಿ ಭೂಸ್ವಾಧೀನ)

ಅಧಿಸೂಚನೆ

ನಂ.ಕಂ/ವಿಭೂಸ್ವಾ/ಕೊಹರೈಲ್ವೆ/ಸಿಆರ್/15/2002–03 (ಭಾಗ–2) ದಿನಾಂಕ:20ನೇ ಅಕ್ಟೋಬರ್, 2010

ಕರ್ನಾಟಕ ಸರ್ಕಾರದ 1961ನೇ ಸಾಲಿನ ಕರ್ನಾಟಕ ಅಧಿನಿಯಮ ಕ್ರಮಸಂಖ್ಯೆ 17ರಲ್ಲಿ ತಿದ್ದುಪಡಿಯಾದ 1894ನೇ ಸಾಲಿನ ಭೂಸಂಗ್ರಹಣ ಅಧಿನಿಯಮದ (1894ನೇ ಕೇಂದ್ರ ಅಧಿನಿಯಮ 1ರ ಪ್ರಕರಣ 16(2)ರ ಮೇರೆಗೆ) ಈ ಮೂಲಕ ಅನುಸೂಚಿಯಡಿ ಸೂಚಿಸಲಾದ ಜಮೀನುಗಳನ್ನು ಒಂದು ಸಾರ್ವಜನಿಕ ಉದ್ದೇಶಕ್ಕಾಗಿ, ಅಂದರೆ ಕೊಟ್ಟೂರು–ಹರಿಹರ ರೈಲ್ವೆ ಬ್ರಾಡ್‌ಗೇಜ್ ಲೈನ್ ನಿರ್ಮಾಣದ ಅಗಲೀಕರಣಕ್ಕಾಗಿ ಅಧಿಕೃತವಾಗಿ ಸದರಿ ಭೂಸ್ವಾಧೀನ ಕಾಯಿದೆ ಕಲಂ.16(2)ರಂತೆ ವಶಪಡಿಸಿಕೊಳ್ಳಲಾಗಿದೆ ಎಂದು ಸಾರ್ವಜನಿಕರ ಹಾಗೂ ಸಂಬಂಧಿಸಿದವರ ತಿಳುವಳಿಕೆಗಾಗಿ ಈ ಅಧಿಸೂಚನೆಯ ಮೂಲಕ ಪ್ರಕಟಿಸಲಾಗಿದೆ ಹಾಗೂ ನೈರುತ್ಯ ರೈಲ್ವೆ ಇಲಾಖೆಯ ಪರವಾಗಿ ಭೂಸ್ವಾಧೀನಪಡಿಸಲಾಗಿದೆ.

ಅನುಸೂಚಿ

ಜಿಲ್ಲೆ: ದಾವಣಗೆರೆ ತಾಲ್ಲೂಕು: ಹರಪನಹಳ್ಳಿ ಹೋಬಳಿ: ತೆಲಗಿ ಗ್ರಾಮ: ಶಿರಗಾನಹಳ್ಳಿ

ಕ್ರ. ಸಂ.	ಕಲಂ.6(1)ರ ಪ್ರಕಾರ ಸರ್ವೆ ನಂಬರು	ತರಹೆ	ಯಾವ ದಿಕ್ಕಿಗೆ ಭೂಸ್ವಾಧೀನವಾಗಿದೆ	ಒಟ್ಟು ವಿಸ್ತೀರ್ಣ ಎ.ಸೆಂ.	ಆಕಾರ ರೂ.ಪೈ.	ಜಮೀನು ಸ್ವಾಧೀನಕ್ಕೆ ಪಡೆದ ದಿನಾಂಕ	ಭೂಸ್ವಾಧೀನಕ್ಕೊಳಪಟ್ಟ ಪಟ್ಟಾದಾರರ ಹೆಸರು	ಆರ್.ಟಿ.ಸಿ. ಪ್ರಕಾರ ಸರ್ವೆ/ ಹಿಸ್ಸಾ ನಂಬರ್ & ವಿಸ್ತೀರ್ಣ
1	**2**	**3**	**4**	**5**	**6**	**7**	**8**	**9**
1.	59/ಎ1	ಖುಷ್ಕಿ	ಪಶ್ಚಿಮಕ್ಕೆ	0–17	0–10	03.08.2009	ಕೆ.ಶಿವಪ್ಪ ಬಿನ್ ಸಿದ್ದಪ್ಪ	59/ಎ1 7–34

ಕ್ರ. ಸಂ.	ಕಲಂ.6(1)ರ ಪ್ರಕಾರ ಸರ್ವೆ ನಂಬರು	ತರಹೆ	ಯಾವ ದಿಕ್ಕಿಗೆ ಭೂಸ್ವಾಧೀನವಾಗಿದೆ	ಒಟ್ಟು ವಿಸ್ತೀರ್ಣ ಎ.ಸೆಂ.	ಆಕಾರ ರೂ.ಪೈ.	ಜಮೀನು ಸ್ವಾಧೀನಕ್ಕೆ ಪಡೆದ ದಿನಾಂಕ	ಭೂಸ್ವಾಧೀನಕ್ಕೊಳಪಟ್ಟ ಪಟ್ಟಾದಾರರ ಹೆಸರು	ಆರ್.ಟಿ.ಸಿ. ಪ್ರಕಾರ ಸರ್ವೆ/ ಹಿಸ್ಸಾ ನಂಬರ್ & ವಿಸ್ತೀರ್ಣ
1	2	3	4	5	6	7	8	9
2.	59/ಎ2	ಖುಷ್ಕಿ	ಪಶ್ಚಿಮಕ್ಕೆ	0–17	0–10	03.08.2009	ಕೆ.ಭೀರಪ್ಪ ಬಿನ್ ಸಿದ್ದಪ್ಪ ಇಂಗಳಗೊಂದಿ	59/ಎಪಿ2 3–43
3.	60	ಖುಷ್ಕಿ	ಪೂರ್ವ	0–33	1–35	03.08.2009	ಹರಿಜನ ಗಂಗಮ್ಮ ಕೋಂ ಲೇಟ್ ಲಕ್ಷ್ಮಣ	60 ಪೈಕಿ 2–09
4.	131/ಬಿ	ಖುಷ್ಕಿ	ಪಶ್ಚಿಮ	0–07	0–04	03.08.2009	ಜಯಪ್ಪ ಬಿನ್ ಸೋಮಪ್ಪ	131/ಬಿ 1–49
5.	131/ಡಿ3	ಖುಷ್ಕಿ	ಪಶ್ಚಿಮ ಪಶ್ಚಿಮ ಪೂರ್ವ	0–71	2–13	03.08.2009	ದೊಡ್ಡನಾಗಪ್ಪ ಬಿನ್ ರಾಮಪ್ಪ	131/ಡಿ3ಪಿ1 5–00
ಒಟ್ಟು				1–45	3–72			

ಟಿ. ಮಲ್ಲಪ್ಪ
ವಿಶೇಷ ಭೂಸ್ವಾಧೀನಾಧಿಕಾರಿಗಳು,
ಕೊಟ್ಟೂರು–ಹರಿಹರ ರೈಲ್ವೆ ಬ್ರಾಡ್‌ಗೇಜ್ ಲೈನ್
ನಿರ್ಮಾಣ ಯೋಜನೆ, ಹರಿಹರ, ದಾವಣಗೆರೆ ಜಿಲ್ಲೆ.

ಪಿ.ಆರ್. 418

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ಜಿಲ್ಲೆ, ಬೆಂಗಳೂರು

ಅಂತಿಮ ಅಧಿಸೂಚನೆ

ಸಂಖ್ಯೆ: ಕೆ.ಎಸ್.ಎ:ಸಿಆರ್15/08–09, ದಿನಾಂಕ:9ನೇ ನವೆಂಬರ್, 2010

ಕೆಎಸ್‌ಎ:ಸಿಆರ್:15/08–09 ದಿನಾಂಕ:23.12.2008ರ ಪ್ರಿಲಿಮಿನರಿ ಅಧಿಸೂಚನೆಯನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ, ಅದರಲ್ಲಿ ಸದರಿ ಅಧಿಸೂಚನೆಯ ಷೆಡ್ಯೂಲ್‌ನಲ್ಲಿರುವ ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ ಹೋಬಳಿ, ಕೋರಮಂಗಲ ಗ್ರಾಮದ ಸಿ.ಟಿ.ಎಸ್. ನಂ.392 ರಲ್ಲಿ 0–08 ಗುಂಟೆ ವಿಸ್ತೀರ್ಣದಲ್ಲಿ ಜ್ಯೋತಿ ನಿವಾಸ ಕೊಳಚೆ ಪ್ರದೇಶವನ್ನು ಕರ್ನಾಟಕ ಕೊಳಚೆ ಪ್ರದೇಶಗಳ (ನಿರ್ಮೂಲನೆ ಮತ್ತು ಅಭಿವೃದ್ಧಿ) ಕಾಯ್ದೆ 1973ರ ಸೆಕ್ಷನ್ 3ರ ಅಡಿಯಲ್ಲಿ ಪ್ರಾರಂಭಿಕವಾಗಿ ಕೊಳಚೆ ಪ್ರದೇಶವೆಂದು ಘೋಷಿಸಿ, ಸಂಬಂಧಿಸಿದವರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು.

ಈ ಬಗ್ಗೆ ಆಯುಕ್ತರು, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ಬೆಂಗಳೂರು ಇವರು ದಿನಾಂಕ:03.10.2010ರ ಪತ್ರದಲ್ಲಿ ಸದರಿ ಕೊಳಚೆ ಪ್ರದೇಶವನ್ನು ದಿನಾಂಕ:15.09.2009ರಂದು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯ ಅಧಿಕಾರಿಗಳು ಮತ್ತು ಭೂ ದಾಖಲೆಗಳ ಸಹಾಯಕ ನಿರ್ದೇಶಕರು ನಗರ ಮಾಪನ ತಂಡ–3, ಬೆಂಗಳೂರು ಇವರು ಜಂಟಿಯಾಗಿ ಭೂ ಮಾಪನ ಮಾಡಿರುವುದಾಗಿಯೂ, ಇದರಲ್ಲಿ ವೇದ್ಯವಾದ ಅಂಶವೇನೆಂದರೆ, ಪ್ರಿಲಿಮಿನರಿ ಅಧಿಸೂಚನೆಯಲ್ಲಿ Location of the slum Area ವಿವರಣೆ ಸಂಪೂರ್ಣ ತಪ್ಪಾಗಿದೆಯೆಂದೂ, ಆ ಕಾರಣಕ್ಕಾಗಿ ಅಂತಿಮ ಅಧಿಸೂಚನೆಯಲ್ಲಿ ಈ ನ್ಯೂನತೆಯನ್ನು ಸರಿಪಡಿಸಿ, ಈ ಕೆಳಗಿನಂತೆ ಅಧಿಸೂಚನೆ ಹೊರಡಿಸುವಂತೆ ಕೋರಿರುತ್ತಾರೆ.

ಕ್ರ. ಸಂ.	ಕೊಳಚೆ ಪ್ರದೇಶದ ಹೆಸರು ಮತ್ತು ಸ್ಥಳ	ಕೊಳಚೆ ಪ್ರದೇಶದಲ್ಲಿರುವ ಜಮೀನಿನ ಮಾಲೀಕರ ಹೆಸರು	ಸರ್ವೆ ನಂ.	ವಿಸ್ತೀರ್ಣ ಎಕರೆ/ ಗುಂಟೆ	ಚೆಕ್ಕುಬಂದಿಗಳು			
					ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1.	ಜ್ಯೋತಿನಿವಾಸ ಕೊಳಚೆ ಪ್ರದೇಶ ಕೋರಮಂಗಲ ಗ್ರಾಮ, ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು	CITB/BDA	CTS No.391 ಸರ್ವೆ ನಂ.147/2 ಮತ್ತು 147/3	0–22.04 ಗುಂಟೆ ಅಥವಾ 2245 ಚದರ ಮೀಟರ್‌ಗಳು	ರಸ್ತೆ	ರಸ್ತೆ	ಖಾಸಗಿ ಕಟ್ಟಡಗಳು	ರಸ್ತೆ

ಏತನ್ಮಧ್ಯೆ ಶ್ರೀ ಟಿ.ರಾಜು ಬಿನ್ ತಿಮ್ಮಯ್ಯ ಎಂಬುವರು ದಿನಾಂಕ:23.11.2009 ಮತ್ತು 21.06.2010 ರಂದು ತಕರಾರು ಸಲ್ಲಿಸಿರುತ್ತಾರೆ.

(ಎ) ಸದರಿಯವರ ತಕರಾರು ಅರ್ಜಿಯಲ್ಲಿ, ಅವರು ಪ್ರಶ್ನಿತ CTS No.391 ಸರ್ವೆ ನಂ.147/1 ವಿಸ್ತೀರ್ಣ 2–02 ಎಕರೆ/ಗುಂಟೆ ತಮ್ಮ ಖಾಸಗಿ ಸ್ವತ್ತೆಂದು ಇದಕ್ಕೆ ಸಂಬಂಧಿಸಿದಂತೆ ಪ್ರಿನ್ಸಿಪಲ್ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ, ಬೆಂಗಳೂರು ಇಲ್ಲಿ ಓ.ಎಸ್.1336/2009 ರಂತೆ ದಾವೆಯನ್ನು ಹೂಡಿದ್ದು, ಈ ನ್ಯಾಯಾಲಯ ಪ್ರಕರಣದಲ್ಲಿ ದಿನಾಂಕ:25.05.2009ರಂದು "The defendents are directed not to interfere with the plaintiff possession of the suit schedule property till the disposal of I.A. No.1" ಎಂದು ಮಧ್ಯಂತರ ಆದೇಶ ನೀಡಲಾಗಿದೆಯೆಂದು ತಿಳಿಸಿರುತ್ತಾರೆ.

ಆದರೆ ಸದರಿ ನ್ಯಾಯಾಲಯದ ಪ್ರಕರಣದಲ್ಲಿ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ಮತ್ತು ಆಯುಕ್ತರು, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ಬೆಂಗಳೂರು ಇವರುಗಳನ್ನು ಪ್ರತಿವಾದಿಗಳನ್ನಾಗಿ ಸೇರಿಸಿರುವುದಿಲ್ಲ.

ಆಯುಕ್ತರು, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ಬೆಂಗಳೂರು ತಮ್ಮ ದಿನಾಂಕ:03.10.2010ರ ವರದಿಯಲ್ಲಿ ಈಗ ಅಂತಿಮ ಅಧಿಸೂಚನೆಗೆ ಕೋರಿರುವ/ ಹೊರಡಿಸುತ್ತಿರುವ ಜಾಗವು ಸರ್ವೆ ನಂ.147/2 ಮತ್ತು 147/3ಕ್ಕೆ ಸೇರಿದ್ದು, ಈ ಜಾಗಕ್ಕೂ ಶ್ರೀ ಟಿ.ರಾಜು ಬಿನ್ ತಿಮ್ಮಯ್ಯ ರವರ ಜಾಗಕ್ಕೂ ಯಾವುದೇ ಸಂಬಂಧವಿಲ್ಲವೆಂದು ತಿಳಿಸಿರುತ್ತಾರೆ.

ಪ್ರಶ್ನಿತ ಕೊಳಚೆ ಪ್ರದೇಶದಲ್ಲಿ ಗುಡಿಸಲು/ ಮನೆಗಳು ದುರಸ್ತಿ ಇಲ್ಲದೇ ಕುಡಿಯುವ ನೀರು, ದೀಪ, ರಸ್ತೆ, ಚರಂಡಿ ಇತ್ಯಾದಿ ಮೂಲಭೂತ ಸೌಕರ್ಯಗಳಿಲ್ಲದೇ ಅನಾರೋಗ್ಯದ ವಾತಾವರಣ ಉಂಟಾಗಿರುತ್ತದೆ. ಸದರಿ ಪ್ರದೇಶವನ್ನು ಅಭಿವೃದ್ಧಿಪಡಿಸುವುದು ಅತ್ಯಗತ್ಯವಿರುತ್ತದೆ. ಆದ್ದರಿಂದ ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನೆ) ಕಾಯ್ದೆ 1973 ರಡಿಯಲ್ಲಿ ದತ್ತವಾಗಿರುವ ಅಧಿಕಾರದಂತೆ ದಿನಾಂಕ:23.12.2008ರ ಪ್ರಿಲಿಮಿನರಿ ಅಧಿಸೂಚನೆಯಲ್ಲಿನ ಷೆಡ್ಯೂಲ್‌ನಲ್ಲಿ ಆಗಿರುವ ವ್ಯತ್ಯಾಸವನ್ನು ಸರಿಪಡಿಸಿ, ಈ ಕೆಳಕಂಡ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಪ್ರದೇಶವನ್ನು ಮೇಲ್ಕಂಡ ಕಾಯ್ದೆಯ ಸೆಕ್ಷನ್ 3 ರಡಿಯಲ್ಲಿ ಅಂತಿಮವಾಗಿ ಕೊಳಚೆ ಪ್ರದೇಶವೆಂದು ಘೋಷಿಸಿರುತ್ತೇನೆ.

ಕ್ರ. ಸಂ.	ಕೊಳಚೆ ಪ್ರದೇಶದ ಹೆಸರು ಮತ್ತು ಸ್ಥಳ	ಕೊಳಚೆ ಪ್ರದೇಶದಲ್ಲಿರುವ ಜಮೀನಿನ ಮಾಲೀಕರ ಹೆಸರು	ಸರ್ವೆ ನಂ.	ವಿಸ್ತೀರ್ಣ ಎಕರೆ/ ಗುಂಟೆ	ಚೆಕ್ಕುಬಂದಿಗಳು			
					ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1.	ಜ್ಯೋತಿನಿವಾಸ ಕೊಳಚೆ ಪ್ರದೇಶ ಕೋರಮಂಗಲ ಗ್ರಾಮ, ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು	CITB/BDA	CTS No.391 ಸರ್ವೆ ನಂ.147/2 ಮತ್ತು 147/3	0–22.04 ಗುಂಟೆ ಅಥವಾ 2245 ಚದರ ಮೀಟರ್‌ಗಳು	ರಸ್ತೆ	ರಸ್ತೆ	ಖಾಸಗಿ ಕಟ್ಟಡಗಳು	ರಸ್ತೆ

ಎಂ.ಕೆ. ಅಯ್ಯಪ್ಪ
ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ, ಬೆಂಗಳೂರು.

ಪಿ.ಆರ್. 433

ತಹಶೀಲ್ದಾರ್‌ರವರ ಕಾರ್ಯಾಲಯ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು

ನಂ.ಆರ್.ಯು.ಸಿ.ಸಿ.ಆರ್.27/10–11

ವಿಷಯ: ಬೆಂಗಳೂರು ದಕ್ಷಿಣ ತಾಲ್ಲೂಕಿನ ಅನಧಿಕೃತ ಸಾಗುವಳಿ ಸಕ್ರಮಗೊಳಿಸುವ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸರಹದ್ದಿನಿಂದ 18 ಕಿ.ಮೀಟರ್ ವ್ಯಾಪ್ತಿಯ ಜಮೀನುಗಳ ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸಬಾರದೆಂಬ ವಿಚಾರ.

ಉಲ್ಲೇಖ: 1) ಅಧ್ಯಕ್ಷರು ಸರ್ಕಾರಿ ಜಮೀನುಗಳ ಸಂರಕ್ಷಣಾಪಡೆ ಬೆಂಗಳೂರು ಇವರ ಪತ್ರದ ನಂ.ಡಿ.ಓ.ನಂ. ಸಿಟಿಎಫ್/7/2010–11 ದಿನಾಂಕ:28.09.2010.

2) ಜಿಲ್ಲಾಧಿಕಾರಿಗಳ ಆರ್. ಸರ್ಕಾರಿ ಪತ್ರದ ಸಂಖ್ಯೆ: ಆರ್.ಯು.ಸಿ.ಸಿ.ಆರ್.105/10–11 ದಿನಾಂಕ:03.11.2010.

ಅಧಿಸೂಚನೆ

ಬೆಂಗಳೂರು ದಕ್ಷಿಣ ತಾಲ್ಲೂಕಿನ ಗ್ರಾಮಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸರಹದ್ದಿನಿಂದ 18 ಕಿ.ಮೀ. ವ್ಯಾಪ್ತಿಯೊಳಗೆ ಬರುವಂತಹ ಗ್ರಾಮಗಳ ಪಟ್ಟಿ ಮತ್ತು ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯೊಳಗೆ ಬರುವ ಗ್ರಾಮಗಳ ಪಟ್ಟಿಯನ್ನು ಸಾರ್ವಜನಿಕ ತಿಳುವಳಿಕೆಗಾಗಿ ಪ್ರಕಟಿಸಬೇಕಾಗಿದೆ. ಕಾರಣ ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸುವ ಬಗ್ಗೆ ಅರ್ಜಿಗಳನ್ನು ಪರಿಗಣಿಸುವಾಗ ಸದರಿ ಪಟ್ಟಿಗಳನ್ನು ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಬೇಕಾಗಿರುವುದರಿಂದ ಕೂಡಲೇ ಸದರಿ ಪಟ್ಟಿಯನ್ನು ಪ್ರಕಟಿಸಲು ಉಲ್ಲೇಖದ ಆದೇಶಗಳಂತೆ ನಿರ್ಧರಿಸಲಾಗಿದೆ.

ಯಾವುದೇ ವ್ಯಕ್ತಿ ಇತರೆ ವ್ಯಕ್ತಿಗಳು ಹಾಗೂ ಸಾರ್ವಜನಿಕರು ಬಿ.ಬಿ.ಎಂ.ಪಿ. ಸರಹದ್ದಿನಿಂದ 18 ಕಿ.ಮೀ. ವ್ಯಾಪ್ತಿಯ ಪಟ್ಟಿಯ ಬಗ್ಗೆ ತಮ್ಮಗಳ ಯಾವುದೇ ವಿಧದ ಆಕ್ಷೇಪಣೆಗಳಿದ್ದಲ್ಲಿ ಈ ಅಧಿಸೂಚನೆ ಹೊರಡಿಸಿದ 90 ದಿನಗಳೊಳಗಾಗಿ ತಹಶೀಲ್ದಾರ್ ಬೆಂಗಳೂರು ದಕ್ಷಿಣ ತಾಲ್ಲೂಕು ರವರಿಗೆ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದೆ. 90 ದಿನಗಳ ನಂತರ ಬಂದ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ತಹಶೀಲ್ದಾರ್
ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು.

ಬೆಂಗಳೂರು ದಕ್ಷಿಣ ತಾಲ್ಲೂಕು ಬಿಬಿಎಂಪಿ ಯೊಳಗೆ ಬರುವ ಗ್ರಾಮಗಳು

ಹೋಬಳಿ	ಗ್ರಾಮಗಳು
ಕೆಂಗೇರಿ	ಬಿ.ಎಂ. ಕಾವಲ್, ಅಗರ, ಬಿ.ಎಂ.ಕಾವಲ್ (ಪೋ), ದೊಡ್ಡಬೆಲೆ, ವೆಂಕಟಾಪುರ ಕೆಂಗೇರಿ ಗೊಲ್ಲಹಳ್ಳಿ, ರಾಚನಮಡು, ತಗಚಗುಪ್ಪೆ, ಗುಡಿಮಾವು, ದೇವಗೆರೆ, ಕುಂಬಳಗೋಡು ಗೊಲ್ಲಹಳ್ಳಿ, ಗಂಗಸಂದ್ರ, ಗೋಣಿಪುರ, ವಸಂತನಹಳ್ಳಿ, ಚಿನ್ನಕುರ್ಚಿ ಕೃಷ್ಣರಾಜಪುರ, ಹಂಪಾಪುರ, ತಿಪ್ಪೂರು, ಸೀಗಹಳ್ಳಿ, ಕಂಬೀಪುರ, ಕುಂಬಳಗೋಡು ಕಣಿಮಿಣಿಕಿ, ಮಾರಗೊಂಡನಹಳ್ಳಿ, ಮಾಳಿಗೊಂಡನಹಳ್ಳಿ, ಭೀಮನಕುಪ್ಪೆ, ರಾಮಸಾಗರ ಭೀಮನಕುಪ್ಪೆ, ರಾಮೋಹಳ್ಳಿ, ಚಳ್ಳಘಟ್ಟ, ಕೆಂಚನಪುರ, ರಾಮಸಂದ್ರ, ಸೂಲಿಕೆರೆ.
ಬೇಗೂರು	ಹೊಮ್ಮದೇವನಹಳ್ಳಿ, ಮೈಲಸಂದ್ರ, ವಿಟ್ಟಸಂದ್ರ, ದೊಡ್ಡತೋಗೂರು, ಬೆಟ್ಟದಾಸನಪುರ ದೊಡ್ಡನಾಗಮಂಗಲ, ಕೋನಪ್ಪನ ಅಗ್ರಹಾರ.
ತಾವರೆಕೆರೆ	ಎಂ.ಕೃಷ್ಣಸಾಗರ, ಕೊಮ್ಮಘಟ್ಟ, ಕೃಷ್ಣಸಾಗರ, ಅಜ್ಜನಹಳ್ಳಿ, ಮಾದಪಟ್ಟಣ, ಹುಲುವೇನಹಳ್ಳಿ, ಸುಲಿವಾರ, ಬ್ಯಾಲಾಳು, ಸುಲಿವಾರ ರಾಂಪುರ, ಚಿಕ್ಕನಹಳ್ಳಿ, ದೊಣ್ಣೇನಹಳ್ಳಿ, ಕುರುಬರಹಳ್ಳಿ, ವಡಹಳ್ಳೀ, ದೊಡ್ಡೇರಿ, ವರ್ತೂರು, ನರಸಿಂಹಪುರ, ಗಂಗೇನಹಳ್ಳಿ, ಜೋಗೇರಹಳ್ಳಿ, ತವಕದಹಳ್ಳಿ, ನಾಗನಹಳ್ಳಿ, ದೇವಮಾಚೋಹಳ್ಳಿ, ನಾರಾಯಣಪುರ, ತಿಪ್ಪಗೊಂಡನಹಳ್ಳಿ, ಮಾರೇನಹಳ್ಳಿ, ದೇವಮಾಚೋಹಳ್ಳಿ, ಬೈಚಗುಪ್ಪೆ, ಚೋಳನಾಯಕನಹಳ್ಳಿ, ಗಂಗಪ್ಪನಹಳ್ಳಿ, ಗಾಣಕಲ್ಲು, ಕೆಂಪಗೊಂಡನಹಳ್ಳಿ, ಪೆದ್ದನಪಾಳ್ಯ, ಪುರದಪಾಳ್ಯ, ದೊಡ್ಡಮಾರನಹಳ್ಳಿ, ಕರಿಗಿರಿಪುರ, ಪುನಗಮಾರನಹಳ್ಳಿ, ಗಂಗಪ್ಪನಹಳ್ಳೀ, ಚುಂಚನಕುಪ್ಪೆ, ಕೇತೋಹಳ್ಳಿ, ಕೋತೋಹಳ್ಳಿ ನರಸಿಂಹಪುರ, ಚಿಕ್ಕೆಲ್ಲೂರು, ಕೋಲೂರು, ಕೋತೋಹಳ್ಳಿ ರಾಂಪುರ, ಚಿಕ್ಕೆಲ್ಲೂರು ರಾಂಪುರ, ಕೋಲೂರು ಗುರುರಾಯನಪುರ, ಚಿಕ್ಕೆಲ್ಲೂರು ರಾಂಪುರ, ಶೇಷಗಿರಿಪುರ, ಕೋಲೂರು ನಂಜುಂಡಾಪುರ, ಕುರುಬರಹಳ್ಳಿ, ಹೊನ್ನಿಗನಹಟ್ಟಿ, ಚೆನ್ನನಹಳ್ಳಿ, ತಾವರೆಕೆರೆ, ಯಲಚಗುಪ್ಪ, ರಾಂಪುರ, ಮುದ್ದಯ್ಯನಪಾಳ್ಯ.
ಉತ್ತರಹಳ್ಳಿ	ತಿಪ್ಪಸಂದ್ರ, ಅಂಜನಾಪುರ, ಗೊಲ್ಲಹಳ್ಳಿ, ಕೆಂಬತ್ತಹಳ್ಳಿ, ಪಿಲ್ಲಗಾನಹಳ್ಳಿ, ಕೋಣನಕುಂಟೆ, ಚುಂಚಘಟ್ಟ, ದೊಡ್ಡಕಲ್ಲಸಂದ್ರ, ಆಲಹಳ್ಳಿ, ಗೊಟ್ಟಿಗೆರೆ, ಕೊತ್ತನೂರು ರಘುವನಪಾಳ್ಯ, ವಡ್ಡರಪಾಳ್ಯ, ಸುಬ್ರಮಣ್ಯಪುರ, ಮರಳಕುಂಟೆ, ಮಾರೇನಹಳ್ಳಿ, ಕಗ್ಗಲೀಪುರ, ಉತ್ತರಿ, ಓ.ಬಿ. ಚೂಡಹಳ್ಳಿ, ಕೆ.ಚೂಡಹಳ್ಳಿ, ಕೆ.ಚೂಡಹಳ್ಳಿ, ನಾಗನಾಯಕಹಳ್ಳಿ, ಸೋಮನಹಳ್ಳಿ, ನೆಲಗುಳಿ, ವಡ್ಡರಪಾಳ್ಯ, ಸುಂಕದಕಟ್ಟೆ, ನೆಟ್ಟಿಗೆರೆ, ರಾವೂಗೋಡ್ಲು, ಮನವರ್ತೆಕಾವಲ್, ಮಲ್ಲಸಂದ್ರ, ಗುಳಕಮಲೆ, ತರಳು, ಅಳಕಬಳಲು, ತಟ್ಟಗುಪ್ಪೆ.

ತಹಶೀಲ್ದಾರ್

ಪಿ.ಆರ್. 444 ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು.

ವಿಶೇಷ ಭೂ ಸ್ವಾಧೀನಾಧಿಕಾರಿಗಳ ಕಾರ್ಯಾಲಯ, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು

ಭೂಸ್ವಾಧೀನ ಕಾಯ್ದೆ ಕಲಂ 16(2)ರ ಅನ್ವಯ ಅಧಿಸೂಚನೆ

ಕ್ರಮಾಂಕ: ಎಲ್ಎಸಿ:ಸಿಆರ್:3:09–10, ದಿನಾಂಕ:25ನೇ ನವೆಂಬರ್, 2010

ಕರ್ನಾಟಕ ರಾಜ್ಯ ಸರ್ಕಾರದ ಅಧಿನಿಯಮ 1961 ಕಲಂ 17ರಲ್ಲಿ ತಿದ್ದುಪಡಿಯಾದಂತೆ ಭೂಸ್ವಾಧೀನ ಅಧಿನಿಯಮ 1994ರ ಅನ್ವಯ ಕಲಂ 16 ಪ್ರಕರಣ (2)ರ ಉಪ ಪ್ರಕರಣ ಮೇರೆಗೆ ಈ ಮುಂದಿನ ಅಧಿಸೂಚಿಯಲ್ಲಿ ಸೂಚಿಸಲಾದ ಜಮೀನುಗಳನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಮತ್ತು ಆಲ್ಟ್ರಾ ಫಿಲ್ಟ್ರೇಷನ್ ಘಟಕ ಸ್ಥಾಪಿಸಲು ಜಲ ಮಂಡಳಿ, ಬೆಂಗಳೂರು ಇವರಿಗೆ ಸದರಿ ಭೂ ಸ್ವಾಧೀನ ಅಧಿನಿಯಮ 16 ಉಪಪ್ರಕರಣ (1)ರ ಉಪಪ್ರಕರಣದಲ್ಲಿ ವಶಪಡಿಸಿಕೊಳ್ಳಲಾಗಿದೆ ಎಂದು ಸಾರ್ವಜನಿಕರ ಹಾಗೂ ಸಂಬಂಧಿಸಿರುವ ತಿಳುವಳಿಕೆಗಾಗಿ ಈ ಅಧಿಸೂಚನೆ ನೀಡುವುದರ ಮೂಲಕ ಪ್ರಕಟಿಸಲಾಗಿದೆ. ಈ ಪ್ರಕರಣದಲ್ಲಿ ಯಾವುದೇ ರಿಟ್ ಅರ್ಜಿಗಳು ಇದ್ದಲ್ಲಿ ಅರ್ಜಿಯ ನಿರ್ಣಯಕ್ಕೆ ಒಳಪಟ್ಟು ಈ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಅನುಸೂಚಿ

ಜಿಲ್ಲೆ: ಬೆಂಗಳೂರು ತಾಲ್ಲೂಕು: ಬೆಂಗಳೂರು ದಕ್ಷಿಣ ಹೋಬಳಿ: ತಾವರೆಕೆರೆ ಗ್ರಾಮ: ತಾವರೆಕೆರೆ

ಕ್ರ. ಸಂ.	ಪ್ರಕರಣದ ಸಂಖ್ಯೆ	ಸರ್ವೆ ನಂ.	ತರಹೆ	ವಿಸ್ತೀರ್ಣ ಎ:ಗುಂ	ಭೂಸ್ವಾಧೀನ ಸುಬರ್ದು ಪಡೆದ ದಿನಾಂಕ
1	2	3	4	5	6
1.	ಎಲ್ಎಕ್ಯೂ:ಎಸ್ಆರ್:3:09–10	43ರ ಪೈಕಿ	ಖುಷ್ಕಿ	2–39 0–14 ಖರಾಬು	26.08.2010
ಒಟ್ಟು				**3–13**	

ವಿಶೇಷ ಭೂಸ್ವಾಧೀನಾಧಿಕಾರಿಗಳು,

ಪಿ.ಆರ್. 449 ಬೆಂಗಳೂರು.